(*c*) whether Government have thought of taking up this enterprise ?

A.—Sri H. SIDDAVEERAPPA (Minister for Home and Industries).—

(*a*)— *Place*	*Mining for mineral*
(i) Bageshapura	... China clay.
(ii) Bilenahalli, Appennhalli, Jadagatte Villages	... Soapstone.
(iii) Lakshmidevarahalli	... Chromite.
(iv) Kalyadi	... Corundum.

(*b*) *Year*	*Quantity*
1952	... 284 tons.
1953	... 55·2 ,,
1954	... 531·25 ,,

(*c*) No.

ಶ್ರೀ ಕೆ. ಪಂಚಾಕ್ಷರಯ್ಯ.—ತಾವು ನನ್ನ ಪ್ರಶ್ನೆಗೆ ಉತ್ತರ ಒದಗಿಸಿರುವುದರಲ್ಲ ಇಲ್ಲ ಕೇವಲ ನಾಲ್ಕು ಖನಿಜಸಂಪತ್ತುಗಳು ಮಾತ್ರ ಇವೆಯೆಂದು ಹೇಳಿದ್ದೀರಿ. ಹಾಗಾದರೆ ಇಲ್ಲ ಮತ್ತೆ ಯಾವ ಬೇರೆ ಖನಿಜಸಂಪತ್ತು ಗಳೂ ಇಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ನನಗೆ ತಿಳಿದು ಬಂದಿರುವ ಮಟ್ಟಿಗೆ ನಿಮ್ಮ ತಾಲ್ಲೂಕಿನಲ್ಲ ಇನ್ನಾವ ಕಲ್ಲಿಗೂ ಅಷ್ಟು ಪ್ರಾಶಸ್ತ್ಯವಿಲ್ಲವೆಂದು ತಿಳಿದು ಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಇದನ್ನು ತಾವು ಯಾವ ಆಧಾರದ ಮೇಲೆ ಹೇಳುತ್ತಿದ್ದೀರಿ !

ಶ್ರೀ ಎಚ್. ಸಿದ್ದವೀರಪ್ಪ.—ನಮ್ಮ ಸರ್ಕಾರದವರು ತಯಾರಿಸಿರತಕ್ಕ ಆಧಾರಗಳ ಮೇಲೆ ಹೇಳುತ್ತಿದ್ದೇನೆ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ತಪಶೀಲುಗಳನ್ನು ಅವರು ಯಾವಾಗ ತಯಾರು ಮಾಡಿದ್ದು ?

ಶ್ರೀ ಎಚ್. ಸಿದ್ದವೀರಪ್ಪ.—ಬಹಳ ದಿವಸಗಳಾಗಿವೆ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗೆ ಒಂದು ಸರ್ವೆ ಪರಿಶೀಲನೆ ನಡೆಸಿದ್ದು ಯಾವಾಗ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಮ್ಮಲ್ಲಿರತಕ್ಕ ರೇಟೆಸ್ಟ್ ಅಂಕಿ ಅಂಶಗಳ ಆಧಾರದ ಮೇಲೆ ಇದನ್ನು ತಿಳಿಸಲಾಗಿದೆಯೆಂದು ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ತಾವು ಈ ಕೊರಂಗದ ಕಲ್ಲು ಎಷ್ಟು ಸಿಕ್ಕುತ್ತದೆಯೆಂದು ಕೇಳಿರುವುದಕ್ಕೆ ಟನ್ನುಗಳ ಲೆಕ್ಕ ಹೇಳಿದ್ದೀರಿ. ಇದನ್ನು ಯಾರ ನಿರ್ಧರಮಾಡಿರುವವರು ? ಇದರ ಲೆಕ್ಕಾಚಾರ ಮಾಡಿರುವವರ ಯಾರು ?

Sri H. SIDDAVEERAPPA.—As collected by the Department.

ಶ್ರೀ ಕೆ. ಪಂಚಾಕ್ಷರಯ್ಯ.—ನಾನು ಕೇಳುತ್ತಿರುವುದು—ತಾವೀಗ ತಯಾರುಮಾಡಿರತಕ್ಕ ಲೆಕ್ಕಗಳು ಸರ್ಕಾರದವರಿಂದ ಮಾಡಿದವುಗಳೋ ಅಥವಾ ಖಾಸಗೀ ಮೈನಿಂಗ್ ಸಂಸ್ಥೆಯವರು ತಯಾರಿಸಿರುವ ಲೆಕ್ಕಗಳೋ ಎಂದು.

ಶ್ರೀ ಎಚ್. ಸಿದ್ದವೀರಪ್ಪ.—ಈಗ ನಮ್ಮಲ್ಲ ವರ್ಷ ವರ್ಷದ ಲೆಕ್ಕಗಳೂ ಇವೆ. ಈ ಲೆಕ್ಕಗಳನ್ನು ಸರ್ಕಾರದವರೇ ಮಾಡಲ ಅಥವಾ ಮೈನಿಂಗ್ ಕಂಪೆನಿಯವರೇ ಮಾಡಲ, ಇಬ್ಬರಿಗೂ ಇದನ್ನು ತಯಾರಿಸಲು ಇರತಕ್ಕ ಆಧಾರ ಮಾತ್ರ ಒಂದೇ. ಆದರಲ್ಲೀನೂ ವ್ಯತ್ಯಾಸ ವಾಗುವುದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಆ ಕಂಪನಿಯವರು ಈಗ ಈ ಕಲ್ಲು ಎಷ್ಟು ಖರ್ಚಾಗುತ್ತಾ ಇದೆಯೆಂದು ಸರ್ಕಾರಕ್ಕೆ ತಿಳಿಸಿದ್ದಾರೆ ? ಎಷ್ಟು ಕಲ್ಲನ್ನು ಅವರೀಗ ತೆಗೆಯುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ಎಷ್ಟು ಕಲ್ಲುಗಳನ್ನು ತೆಗೆಯುತ್ತಾರೋ ಅದು ನನ್ನಲ್ಲಿ ಈಗ ಇಲ್ಲ. ಅಂತೂ ಅವರು ಎಷ್ಟು ಕಲ್ಲುಗಳನ್ನು ಈಗ ತೆಗೆಯುತ್ತಿದ್ದಾರೋ ಅಷ್ಟನ್ನೂ ಮಾರಾಟ ಮಾಡುತ್ತಿದಾರೆಂಬುದಕ್ಕೆ ನಮ್ಮಲ್ಲ ಲೆಕ್ಕವಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈ ಕೊರಂಗದ ಕಲ್ಲಿನಿಂದ ಅವರಿಗೆ ಎಷ್ಟು ಫಾಯಿದೆ ಬಂದಿದೆಯೆಂಬ ಅಂತ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆಷ್ಟು ಲಾಭ ಬಂದಿದೆ ಎನ್ನುವುದು ನಮಗೆ ಗೊತ್ತಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—1954ರಲ್ಲಿ 531·25 ಟನ್ ಕಲ್ಲನ್ನು ತೆಗೆಸಿದ್ದರೆಂದು ತಿಳಿಸಲಾಗಿದೆ. ಅದನ್ನೆಲ್ಲಾ 16,250 ರೂಪಾಯಿಗಳಿಗೆ ಮಾರಾಟ ಮಾಡಲಾಗಿದೆ. ಇದರಿಂದ ಅವರಿಗೀಗ ಲುಕ್ಸಾನಾಗಿದೆಯೆಂಬ ಅಂಶ ತಮಗೆ ತಿಳಿದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರಿಗೆ ಇದರಲ್ಲ ಲಾಭವಾಗಿದೆಯೇ ಅಥವಾ ಲುಕ್ಸಾನಾಗಿದೆಯೇ ಎನ್ನುತಕ್ಕ ಅಂತ ನಮಗೆ ತಿಳಿದು ಬಂದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಾದರೆ ಈಗ ಆ ಮೈನಿಂಗ್ ಕಂಪೆನಿಯವರಿಗೆ ಇದರಿಂದ ಲುಕ್ಸಾನಾಗುತ್ತಿರುವ ಅಂಶ ನಿಮ್ಮ ಗಮನಕ್ಕೇ ಬಂದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅವರು ತೆಗೆಯುತ್ತಿರುವ ಕಲ್ಲೆಲ್ಲಾ ಹೊರಗಡೆಗೆ ರಫ್ತಾಗುತ್ತಿದೆಯೆಂದು ನಮಗೆ ತಿಳಿದು ಬಂದಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಈಗ ಆ ಉದ್ಯಮದಿಂದ ಅವರಿಗೆ ಲುಕ್ಸಾನಾಗುತ್ತಿರುವ ಕಾರಣ ಇದನ್ನು ನಿಲ್ಲಿಸಬೇಕೆಂದಿರುವ ಅಭಿಪ್ರಾಯ ನಿಮ್ಮ ಗಮನಕ್ಕೆ ಬಂದಿಲ್ಲವೋ !

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗೇನಾದರೂ ಅಂಥ ಸಂದರ್ಭ ಒದಗಿದರೆ ಆಗ ಸರ್ಕಾರದವರು ಆ ಉದ್ಯಮ ನಡೆಸಲು ಅದನ್ನು ತಾವು ಕೈಗೊಳ್ಳುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಊಹಾಪೋಹದ ಪ್ರಶ್ನೆ. ಅಂಥ ಪ್ರಸಂಗ ನಡೆದಾಗ ಅದನ್ನು ಸರ್ಕಾರ ಪರ್ಯಾಲೋಚಿಸುತ್ತದೆ.

ಶ್ರೀ ಕೆ. ಲಕ್ಕಪ್ಪ.—ಅರಸೀಕೆರೆಗೆ ಪಕ್ಕದ ತಾಲ್ಲೂಕುಗಳಲ್ಲ ಈ ತೆರನಾದ ಕಲ್ಲು ಸಿಕ್ಕುವುದಿಲ್ಲವೇ !

ಶ್ರೀ ಎಚ್. ಸಿದ್ದವೀರಪ್ಪ.—ನೋ ಟೇಟ್ಸ್.

Road from Kunthur Doddi to Rampura in Channapatna Taluk.

Q.—8. Sri V. VENKATAPPA (Channapatna Constituency).—

Will the Government be pleased to state :—

(*a*) whether they have acquired and for laying out a road from Kunthur Doddi to Rampura in Channapatna Taluk ;

(*b*) what is the extent ;

(*c*) whether (i) the road work has been taken up and (ii) the compensation paid to the land-holders ; if not why ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) Thirty-one guntas only.

(*c*) (i) The work has not been taken up.

(ii) Award has been passed for Rs. 1,710-10-0 and notices were also issued to the land-holders on 17th July 1951. They have not taken the compensation so far.

ಶ್ರೀ ವಿ. ವೆಂಕಟಪ್ಪ.—ತಾವು ಇಲ್ಲಿ ಪ್ರಶ್ನೆಗೆ ಉತ್ತರ ಕೊಡುತ್ತಾ, "ಕೆಲಸವನ್ನು ಇನ್ನೂ ಕೈಗೊಂಡಿಲ್ಲ" ಎಂದು ಉತ್ತರ ಕೊಟ್ಟಿದ್ದೀರಿ. ಹಾಗೆ ಆ ರಸ್ತೆಯನ್ನು ಇನ್ನೂ ಮಾಡಬೇಕಾಗಿರುವುದು ಎಷ್ಟು ದೂರ ಇದೆ ?

ಶ್ರೀ ಟಿ. ಚನ್ನಯ್ಯ.—ನುಮಾರು ಒಂದು ಮೈಲಿ ಯಷ್ಟು ಆ ಕೆಲಸವನ್ನಿನ್ನೂ ತೆಗೆದುಕೊಂಡಿಲ್ಲ.

ಶ್ರೀ ವಿ. ವೆಂಕಟಪ್ಪ.—ಆ ಕೆಲಸವನ್ನೇಕೆ ಇನ್ನೂ ತೆಗೆದುಕೊಂಡಿಲ್ಲ ? ಎಷ್ಟು ವರ್ಷಗಳಿಂದ ಈ ವಿಚಾರ ಅಸೆಂಬ್ಲಿಯ ಮುಂದೆ ಚರ್ಚೆಗೆ ಬರುತ್ತಿದೆ ?

ಶ್ರೀ ಟಿ. ಚನ್ನಯ್ಯ.—ಎಷ್ಟು ವರ್ಷಗಳಿಂದಲೂ ಬರುತ್ತಿಲ್ಲ. ಹೋದ 1953ನೇ ಜುಲೈನಲ್ಲಿ ಒಂದಾ ವರ್ತಿ ಮಾತ್ರ ಈ ಪ್ರಶ್ನೆ ಬಂದಿತ್ತು.

ಶ್ರೀ ವಿ. ವೆಂಕಟಪ್ಪ.—ಹಾಗೆಯೇ ಆಗಲಿ. ತಾವೇಕೆ ಇನ್ನೂ ಆ ಕೆಲಸವನ್ನು ಕೈಗೊಂಡಿಲ್ಲ ?

ಶ್ರೀ ಟಿ. ಚನ್ನಯ್ಯ.—ಕೈಗೊಳ್ಳದಿರುವುದಕ್ಕೆ ಕಾರಣವೇನೆಂದರೆ—ಅದರ ಮೊದಲನ ಅಂದಾಜು 6,530 ರೂಪಾಯಿಗಳಿಗೆ ತಯಾರಿಸಲಾಗಿತ್ತು. ಆಗ ಅಷ್ಟು ಹಣವನ್ನು ರೂರಲ್ ಡೆವಲಪ್‌ಮೆಂಟ್ ಫಂಡಿನಿಂದಲೇ ಖರ್ಚುಮಾಡುವುದಕ್ಕಾಗುವುದಿಲ್ಲವೆಂದು ತಿಳಿದುಬಂದುದರಿಂದ ತಮ್ಮ ತಿಟ್ಟಮಾರನಹಳ್ಳಿ ಗ್ರಾಮಪಂಚಾಯಿತಿಯವರು ಈ ಕೆಲಸಕ್ಕೆ ಹಣ ಒದಗಿಸಿದರೆ ಈ ಕೆಲಸವನ್ನು ಕೈಗೊಳ್ಳಬಹುದೆಂದು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ. ಆದರೆ ಹಾಗೆ ಆ ಪಂಚಾಯಿತಿಯವರು ಇನ್ನೂ ಹಣವನ್ನು ಕೊಡದಿರುವ ಕಾರಣ ಕೆಲಸ ನಡೆಯದೆ ಹಾಗೆಯೇ ನಿಂತಿದೆ.

ಶ್ರೀ ವಿ. ವೆಂಕಟಪ್ಪ.—ಅವರು ಕಾಂಟ್ರಿಬ್ಯೂಟ್ ಮಾಡುತ್ತೇವೆಂದು ಹೇಳಿದ್ದರೇನು ? ಯಾವಾಗ ?

ಶ್ರೀ ಟಿ. ಚನ್ನಯ್ಯ.—1951ರಲ್ಲೇ ತಿಳಿಸಲಾಗಿದೆ.

ಶ್ರೀ ವಿ. ವೆಂಕಟಪ್ಪ.—ಹಾಗೆ ಕೊಡಬೇಕೆಂದು ತಾವು ತಿಳಿಸಿದ್ದಿರಾ ?

ಶ್ರೀ ಟಿ. ಚನ್ನಯ್ಯ.—ತಿಳಿಸಿತ್ತು.

ಶ್ರೀ ವಿ. ವೆಂಕಟಪ್ಪ.—"ತಾವು ಇಲ್ಲಿ ಉತ್ತರದಲ್ಲಿ—ಅವಾರ್ಡಾಗಿದೆ. ಅವರಿಗೆಲ್ಲಾ ನೋಟೀಸ್ ಹೋಗಿದೆ. ಹಾಗಾದರೂ ಜಮೀನ್ದಾರರು ಹಣ ತೆಗೆದುಕೊಂಡಿಲ್ಲ" ಎಂದು ತಿಳಿಸಿದ್ದೀರಿ. ಹಾಗೆ ಜಮೀನನ್ನೂ ಬಿಟ್ಟು ಕೊಟ್ಟು—ಇತ್ತ ಆ ಹಣವನ್ನೂ ಸಹ ತೆಗೆದುಕೊಳ್ಳದೆ ಹಾಗೆಯೇ ಬಿಟ್ಟುಬಿಡುವುದು ಎಲ್ಲಾದರೂ ಉಂಟೇ ?

ಶ್ರೀ ಟಿ. ಚನ್ನಯ್ಯ.—ಕೆಲವರು ತೆಗೆದುಕೊಂಡಿಲ್ಲ.

ಶ್ರೀ ವಿ. ವೆಂಕಟಪ್ಪ.—ಕೆಲವರು ಅಂದರೆ, ಹಾಗೆ ತೆಗೆದುಕೊಂಡಿರುವವರು ಯಾರು ?

ಶ್ರೀ ಟಿ. ಚನ್ನಯ್ಯ.—ಕೆಲವರಿನ್ನೂ ಆ ಜಮೀನನ್ನು ಬಿಟ್ಟುಕೊಟ್ಟಿಲ್ಲ. ಆದ್ದರಿಂದ ಹಣವನ್ನು ತೆಗೆದು ಕೊಂಡಿಲ್ಲ.

ಶ್ರೀ ವಿ. ವೆಂಕಟಪ್ಪ.—ಹಾಗೆ ತಾವು ಅವಾರ್ಡ್ ಮಾಡಿರತಕ್ಕವರಲ್ಲಿ ನಾನೂ ಒಬ್ಬ. ನಾನೂ ಸಹ ಜಮೀನನ್ನು ಕೊಟ್ಟಿದ್ದೇನೆ. ಆದರೆ ತಾವು ಹೇಳಿರುವ ಹಾಗೆ ನನಗೇಕೆ ಆ ನೋಟೀಸ್ ಬರಲಿಲ್ಲ ? ಇದನ್ನು ವಿಚಾರಣೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಮಾಡುತ್ತೇವೆ.

Krishnaraja Road passing through K. G. F. (repairs).

Q.—251. Sri SYDNEY A. THOMAS (Nominated).—

Will the Government be pleased to state :—

(*a*) whether Krishnaraja Road passing through Kolar Gold Fields is a State Fund Road ;

(*b*) if so, whether they are aware that long tracts of this main road are in a state of disrepair, especially in the mining area ;

(*c*) when the work of repair will be undertaken ?

A.—Sri T. CHANNIAH (Minister for Public Health and Local Self-Government).—

(*a*) No.

(*b*) and (*c*) A length of 3 miles of this road lies within the limits of the K.G.F. Sánitary Board. Annual repairs have been done in the 8th and 9th miles. The work in the 10th mile will be taken up shortly by the Board.

Sri SYDNEY A. THOMAS.—In view of the large revenues accruing to Government both now and in the past from the Kolar Gold Fields and in the future, will the Government consider taking this Road over as a State Fund Road ?

Sri T. CHANNIAH.—It is within the Kolar Gold Fields Sanitary Board area and the Kolar Gold Fields Sanitary Board is only competent to attend to the repair of the Road and it cannot be taken over as a State Fund Road.